**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)-ರವರ ಕಛೇರಿ,

ಕಾ&ಪಾ ಉಪ-ವಿಭಾಗ, ಚಾವಿಸನಿನಿ,

ಬಿಳಿಕೆರೆ. Telephone No: 9448499992

**CHAMUNDESHWARI ELECTRICITY SUPPLY CORPORATION LIMITED**

**(A Government of Karnataka Undertaking)**

**Office Of: Assistant Executive Engineer Ele**

**O&M Sub-Division, Bilikere**

Web Site: https://cescmysore.karnataka.gov.in

E-mail ID:



**Company Identity Number(CIN): U40109KA2004SGC035177**


ಕ್ರಮಾಂಕ: ಚಾವಿಸನಿನಿ/ಉ.ವಿ/ಬಿಳಿಕೆರೆ/ಸ.ಕಾ.ನಿ.ಇಂ(ವಿ)/ಸ.ಇಂ(ತಾಂ)/2023-24/1545 ದಿನಾಂಕ:27.12.2023

ದಿನಾಂಕ:27.12.2023 ರಂದು ಮಧ್ಯಾಹ್ನ 03:00 ಗಂಟೆಗೆ ಶ್ರೀ ಸುನೀಲ್‌ಕುಮಾರ್.ಎ.ಎ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಚಾವಿಸನಿನಿ ಮೈಸೂರು ರವರ ಅನುಪಸ್ಥಿತಿಯಲ್ಲಿ ಶ್ರೀ ಮಹೇಶ್ ಕುಮಾರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ ಹುಣಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಬಿಳಿಕೆರೆ ಕಾರ್ಯ ಮತ್ತು ಪಾಲನ ಉಪವಿಭಾಗದ ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ ಶ್ರೀ ಮಹೇಶ್ ಕುಮಾರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ ಹುಣಸೂರು.
2. ಶ್ರೀಮತಿ ವಿಜಯರತ್ನಸಿ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಬಿಳಿಕೆರೆ.
3. ಶ್ರೀಮತಿ ಸುಕ್ರಮ್ಮ, ಹಿರಿಯ ಸಹಾಯಕರು(ಪ್ರಭಾರ), ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.
4. ಶ್ರೀ ಮಣಿಕಂಠ, ಸಹಾಯಕ ಇಂಜಿನಿಯರ್ (ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ, ಬಿಳಿಕೆರೆ.
5. ಶ್ರೀ ಜಯಕುಮಾರ್, ಸಹಾಯಕ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬಿಳಿಕೆರೆ
6. ಶ್ರೀ ದೊರೆರಾಜು.ಕೆ.ಸಿ, ಕಿರಿಯ ಇಂಜಿನಿಯರ್(ವಿ,, ಕಾ ಮತ್ತು ಪಾ ಶಾಖೆ, ಕೆ.ಎಸ್.ಗದ್ದಿಗೆ.
7. ಶ್ರೀ ಮಲ್ಲಿಕಾರ್ಜುನ ಎಂ, ಕಿರಿಯ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ, ಬೋಳನಹಳ್ಳಿ.

ಸಭೆಯಲ್ಲಿ ಉಪ-ಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿದೇಶದನ್ವಯ ಪ್ರತಿ ಮುರು ತಿಂಗಳಿಗೊಮ್ಮೆ ಉಪ ವಿಭಾಗದ ಮಟ್ಟದಲ್ಲಿ ಗ್ರಾಹಕ ಜನ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪ ವಿಭಾಗದ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಸೇವೆಯನ್ನು ಉನ್ನತ್ತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ವಿದ್ಯುತ್ ಮಾರ್ಗಗಳಿಂದ ಉಂಟಾಗಬಹುದಾದ ಅಪಘಾತಗಳನ್ನು ತಡೆಗಟ್ಟುವಲ್ಲಿ ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕೆಳಕಂಡಂತೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

- ವಿದ್ಯುತ್ ಕಂಬಗಳನ್ನು ಇತರೆ ಬಳಕೆಗೆ ಬಳಸಬೇಡಿ.
- ತಂತಿ ಬೇಲಿಗೆ ವಿದ್ಯುತ್ ಹರಿಸಬೇಡಿ ಇದು ಶಿಕ್ಷಾರ್ಹ ಅಪರಾಧ
- ವಿದ್ಯುತ್ ತಂತಿಗಳಿಗೆ ಸಿಲುಕಿದ ಗಾಳಿಪಟವನ್ನು ಬಿಡಿಸಲು ಪ್ರಯತ್ನಿಸಬೇಡಿ.
- ವಿದ್ಯುತ್ ಕಂಬಗಳನ್ನು ಇತರೆ ಬಳಕೆಗೆ ಬಳಸಬೇಡಿ

* ಲೋಹದ ವಸ್ತುವನ್ನು ಉಪಯೋಗಿಸುವಾಗ ಮೇಲೆ ಹಾದು ಹೋಗಿರುವ ವಿದ್ಯುತ್ ಮಾರ್ಗದ ಬಗ್ಗೆ ಎಚ್ಚರ ವಹಿಸಿ.

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಇದರ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 01 | ಶ್ರೀ ನಿಂಗಪ್ಪ ಬಿನ್ ಲೇ॥ ನಂಜಪ್ಪ, ದೊಡ್ಡಬೀಚನಹಳ್ಳಿ ಗ್ರಾಮ | ಜಮೀನಿನಲ್ಲಿ ಹಾದು ಹೋಗಿರುವ ಎಲ್.ಟಿ ವಿದ್ಯುತ್ ಲೈನ್‌ನ್ನು ಸ್ಥಳಾಂತರಿಸುವ ಬಗ್ಗೆ. | ಅರ್ಜಿದಾರರಿಗೆ ಸ್ವಯಂ ನಿರ್ವಹಣೆ ಕಾಮಗಾರಿ ಅಡಿಯಲ್ಲಿ ವಿದ್ಯುತ್ ಮಾರ್ಗ ಸ್ಥಳಾಂತರಿಸಿಕೊಳ್ಳಲು ತಿಳಿಸಲಾಯಿತು. |
| 02 | ಶ್ರೀ ಮರಿಯಪ್ಪ ಬಿನ್ ಲೇ॥ ಚಿಕ್ಕಮರಿಯಯ್ಯ, ದೊಡ್ಡಬೀಚನಹಳ್ಳಿ | ಆರ್.ಆರ್.ಸಂಖ್ಯೆ: H4IP7523 Statement ಕೋರಿದರು. | ಹಿರಿಯಸಹಾಯಕರಿಗೆ ನಿಗಮದ ನಿಯಮಾನುಸಾರ ಕೋರಲಾದ ಮಾಹಿತಿ ನೀಡಲು ಸೂಚಿಸಲಾಯಿತು.. |
| 03 | ಶ್ರೀಮತಿ ತಾರಾಮಣಿ ಹೆಚ್.ಎಸ್. ಅಸ್ವಾಲು ಗ್ರಾಮ | ಶ್ರೀಮತಿ ತಾರಾಮಣಿ ಹೆಚ್.ಎಸ್. ಅಸ್ವಾಳು ಗ್ರಾಮ ರವರ ಜಮೀನಿನಲ್ಲಿರುವ ಐ.ಪಿ ಪರಿವರ್ತಕವು ಅಧಿಕ ಒತ್ತಡ ಇರುವುದರಿಂದ ಹೊಸ ಟಿ.ಸಿ ಕೋರಿದರು. | ಪರಿವರ್ತಕವನ್ನು ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು ಹಾಗೂ ಅಂದಾಜು ಪಟ್ಟಿ ತಯಾರಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 04 | ನಾಡಪ್ಪನಹಳ್ಳಿ ಗ್ರಾಮಸ್ಥರು | ಸುಟ್ಟುಹೋಗಿರುವ ನಾಡಪ್ಪನಹಳ್ಳಿ ಐ.ಪಿ ಪರಿವರ್ತಕವನ್ನು ಬದಲಾಯಿಸಿಕೊಡುವಂತೆ ಕೋರಿದರು. | ಸಕಾಲದಲ್ಲಿ ಪರಿವರ್ತಕದ ಬದಲಾವಣೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು. |

ಸ್ವೀಕರಿಸಿದ ದೂರುಗಳನ್ನು ಸರಿಪಡಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಶಾಖಾಧಿಕಾರಿಗಳಿಗೆ/ಹಿರಿಯಸಹಾಯಕರಿಗೆ ಸೂಚಿಸುತ್ತಾ 5-30 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ,
ಬಿಳಿಕೆರೆ

ಪ್ರತಿಗಳು:

1. ಮಾನ್ಯ ಪ್ರದಾನ ವ್ಯವಸ್ಥಾಪಕರು (ಆ ಮತ್ತು ಮಾಸಂ), ಚಾ.ವಿ.ಸ.ನಿ.ನಿ ನಿಗಮ ಕಛೇರಿ ಮೈಸುರು ರವರ ಮಾಹಿತಿಗಾಗಿ.
2. ಮಾನ್ಯ ಪ್ರದಾನ ವ್ಯವಸ್ಥಾಪಕರು (ತಾಂತ್ರಿಕ), ಚಾ.ವಿ.ಸ.ನಿ.ನಿ ನಿಗಮ ಕಛೇರಿ ಮೈಸುರು ರವರ ಮಾಹಿತಿಗಾಗಿ.
3. ಮುಖ್ಯ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ ವಲಯ ಕಛೇರಿ ಮೈಸುರು ರವರ ಮಾಹಿತಿಗಾಗಿ.
4. ಅಧೀಕ್ಷಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ., ಕಾರ್ಯ ಮತ್ತು ಪಾಲನ ಮೈಸೂರು ವೃತ್ತ, ಮೈಸುರು ರವರ ಮಾಹಿತಿಗಾಗಿ.
5. ಕಾರ್ಯನಿರ್ವಾಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹುಣಸುರು ರವರ ಮಾಹಿತಿಗಾಗಿ.
6. ಕಛೇರಿ ಪ್ರತಿ.